This Question Paper consists of 31 questions and 8 printed pages.

Roll No.
ರೋಲ್ ನಂ. | | | | | | | | | | | | Code No. **55/S/O/K**

KANNADA
(ಕನ್ನಡ)
(208)

Set **A**

Day and Date of Examination
ಪರೀಕ್ಷೆಯ ದಿನ ಮತ್ತು ತಾರೀಖು _____

Signature of Invigilators 1. _____

ಉಸ್ತುವಾರಿದಾರರ ರುಜು

2. _____

ಸಾಮಾನ್ಯ ಸೂಚನೆಗಳು :

1. ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.

2. ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಎಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದು ಪರೀಕ್ಷಿಸಿ.

3. ವಸ್ತುನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ (A), (B), (C), (D) ಯನ್ನು ಬರೆಯಬೇಕು.

4. ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.

5. ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್‌ಅನ್ನು ಬರೆಯಕೂಡದು. ಒಂದು ವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನೂರ್ಜಿತಗೊಳಿಸಲಾಗುವುದು.

6. ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ **55/S/O/K-A** ಉತ್ತರ ಪತ್ರಿಕೆಯಲ್ಲಿ ಬರೆಯಿರಿ.

KANNADA

(ಕನ್ನಡ)

(208)

ಸಮಯ : 3 ಗಂಟೆಗಳು] [ಗರಿಷ್ಠ ಅಂಕ : 100

ಸೂಚನೆಗಳು : (1) **ಎಲ್ಲಾ** ಪ್ರಶ್ನೆಗಳಿಗೆ ಉತ್ತರಗಳನ್ನು ಉತ್ತರ ಪುಸ್ತಕದಲ್ಲೆ ಬರೆಯಿರಿ.

(2) ಪ್ರಶ್ನೆ ಮತ್ತು ಉಪ–ಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

(3) ಪ್ರಶ್ನೆ **1** ರಿಂದ **11** ರ ವರೆಗೆ **4** ಆಯ್ಕೆಗಳನ್ನು ಕೊಡಲಾಗಿದೆ. ಅತ್ಯಂತ ಸೂಕ್ತವಾದುದನ್ನು ಆಯ್ಕೆಮಾಡಿ ಉತ್ತರಿಸಿರಿ.

1. ಲೇಖಕರು ವರ್ಗವಾಗಿ ಹೋದ ಊರು _____. **1**

(A) ಮಂಗಳೂರು (B) ಮೈಸೂರು (C) ಚಿಕ್ಕಮಗಳೂರು (D) ಬೆಂಗಳೂರು

2. ಕಡಲು ಪದದ ಸಮನಾರ್ಥಕ ಪದ _____. **1**

(A) ಸರೋವರ (B) ಹೊಳೆ (C) ಸಮುದ್ರ (D) ನದಿ

3. ಕೆರೆಯ ಕಪ್ಪೆಗಳ ಚರ್ಮದ ಬಣ್ಣ _____. **1**

(A) ಹಳದಿ (B) ಹಸುರು (C) ಕಪ್ಪು (D) ಕೆಂಪು

4. ರಾಜನ ಮಗನ ಕಿವಿ _____. **1**

(A) ಅವನದೇ ಆಗಿತ್ತು (B) ಕುದುರೆಯದಾಗಿತ್ತು

(C) ಕತ್ತೆಯದಾಗಿತ್ತು (D) ಹುಲಿಯದಾಗಿತ್ತು

5. ನಂಬಿಗೀಲೆ ದುಡಿತಾನ _____. **1**

(A) ಬಸವಣ್ಣಾ (B) ನಮ್ಮಣ್ಣಾ (C) ನಿಮ್ಮಣ್ಣಾ (D) ಕಸುವಣ್ಣಾ

6. ಶಾಲುಸಾಬಿಯ ಶಾಲಿನ ಬಣ್ಣ _____. **1**

(A) ಹಳದಿ (B) ಕೆಂಪು (C) ಹಸಿರು (D) ಕಪ್ಪು

7. ಭಯ ಕಾಯಿಲೆ ಚಿಹ್ನೆಗಳನ್ನು _____. 1

(A) ಕಡಿತಗೊಳಿಸುತ್ತದೆ (B) ಮೊಟಕುಗೊಳಿಸುತ್ತದೆ

(C) ಹೊಗಲಾಡಿಸುತ್ತದೆ (D) ಹೆಚ್ಚಿಸುತ್ತದೆ

8. ಸಂತೆಯೊಳಗೆ ಮನೆ ಮಾಡಿ ಯಾವುದಕ್ಕೆ ನಾಚಬಾರದು ? 1

(A) ಮದುವೆಗೆ (B) ಹೆಣ್ಣಿಗೆ (C) ಶಬ್ದಕ್ಕೆ (D) ತರಕಾರಿಗೆ

9. ಕಾರಮಕ್ಕ ಎಂದರೆ _____. 1

(A) ನರಮನುಷ್ಯರು (B) ನಗರದವರು

(C) ಅರಣ್ಯದವರು (D) ಕಾರಯ್ಯನ ಮಕ್ಕಳು

10. ಡಾ. ನರಸಿಂಹಯ್ಯ ಅವರು _____ ಎಂದೇ ಖ್ಯಾತರಾದರು. 1

(A) ಕವಿಗಳು (B) ಸಾಹಿತಿಗಳು (C) ಎಚ್ಚೆನ್ (D) ಡಾಕ್ಟರ್

11. ಕನಕದಾಸರ ತಂದೆಯ ಹೆಸರು _____. 1

(A) ಬೀರಪ್ಪ (B) ಸೋಮಪ್ಪ (C) ಆದಿಕೇಶವ (D) ತಿರುಪತಿ

12. ಕೆಳಗೆ ಕೊಟ್ಟ ಗದ್ಯಭಾಗವನ್ನು ಓದಿಕೊಂಡು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ.

ಭವಿಷ್ಯವನ್ನು ತಿಳಿದುಕೊಳ್ಳಬೇಕೆಂಬ ಕುತೂಹಲ ಯಾರನ್ನು ಬಿಟ್ಟಿಲ್ಲ. ಅದನ್ನು ತಿಳಿಯುವುದು ಅಸಾಧ್ಯವೆಂದು ಎಲ್ಲರಿಗೂ ಗೊತ್ತಿದೆ. ಇದನ್ನೆ ಬಂಡವಾಳ ಮಾಡಿಕೊಂಡು ಕೆಲವರು ಸಾಮಾನ್ಯರನ್ನು ಹೆದರಿಸಿ ವಂಚಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿರುವುದು ದುರಂತ. ಜೀವನದಲ್ಲಿ ಎಲ್ಲವೂ ಪೂರ್ವನಿರ್ಧಾರಿತವಾಗುತ್ತದೆ ಎಂಬ ವಿಧಿವಾದವನ್ನು ಜ್ಯೋತಿಷ್ಯ ತಿಳಿಸುತ್ತದೆ. ಜನರು ನಿರಾಸೆಯಲ್ಲಿದ್ದಾಗ ಜ್ಯೋತಿಷಿಗಳ ಮೊರೆ ಹೋಗುತ್ತಾರೆ. ಜ್ಯೋತಿಷಿಗಳು ಇವರಿಗೆ ಅಮಂಗಲ ನಿವಾರಣೆಯ ಶಾಂತಿ, ಹೋಮ, ಜಪ, ತಪ, ಧ್ಯಾನ, ಪೂಜೆ ಮೊದಲಾದವುಗಳನ್ನು ತಿಳಿಸುತ್ತಾ ಖರ್ಚಾಗುವ ಹಣದ ಬಗ್ಗೆ ವಿವರಿಸುವರು. ಇದು ಮುಗ್ಧ ಜನರನ್ನು ಭಯದಲ್ಲಿರಿಸಿ, ಅವರ ಸುಲಿಗೆಗೆ ಕಾರಣವಾಗುತ್ತದೆ. ಇಂದು ಜ್ಯೋತಿಷ್ಯವು ಒಂದು ವಾಣಿಜ್ಯ ಉದ್ಯಮವಾಗಿದೆ. ಭವಿಷ್ಯದ ಆಧಾರದ ಮೇಲೆ ಬದುಕು ನಡೆಯುವುದಿಲ್ಲ ಭವಿಷ್ಯಕಾರರ ಮಾತಿನಂತೆ ಯಾವುದೂ ನಿರ್ಧಾರವಾಗುವುದಿಲ್ಲ, ಜೀವನ ಹೇಗಿರುತ್ತದೋ ಹಾಗೆಯೇ ಸ್ವೀಕರಿಸುವುದು ಬುದ್ಧಿವಂತರ ಲಕ್ಷಣ.

ಪ್ರಶ್ನೆಗಳು :

(1) ಕೆಲವರು ಸಾಮಾನ್ಯರನ್ನು _____. 1

(A) ಪ್ರೀತಿಸುತ್ತಾರೆ (B) ಆದರಿಸುತ್ತಾರೆ

(C) ಹೆದರಿಸುತ್ತಾರೆ (D) ಪೂಜಿಸುತ್ತಾರೆ

(2) ಯಾವುದು ಬಂಡವಾಳ ? 1

(A) ಬುದ್ಧಿ ಹೇಳುವುದು (B) ನೋಡುವುದು

(C) ಮಾತನಾಡುವುದು (D) ಭವಿಷ್ಯ ಹೇಳುವುದು

(3) ಯಾವುದನ್ನು ತಿಳಿಯುವುದು ಅಸಾಧ್ಯ ? 1

(4) ಜ್ಯೋತಿಷಿಗಳು ಯಾವುದರ ಬಗ್ಗೆ ವಿವರಿಸುವರು ? 2

(5) ಸುಲಿಗೆಗೆ ಕಾರಣವಾಗುವ ವಿಷಯ ಯಾವುದು ? 2

(6) ಜೀವನದಲ್ಲಿ ಯಾವುದು ಪೂರ್ವನಿರ್ಧಾರಿತವಾಗುತ್ತದೆ ? 1

(7) ಭವಿಷ್ಯದ ಬಗ್ಗೆ ಎಲ್ಲರಿಗೂ ಗೊತ್ತಿರುವ ವಿಷಯ ಯಾವುದು ? 2

(8) ಬುದ್ಧಿವಂತರ ಲಕ್ಷಣ ಯಾವುದು ? 2

(9) 'ಬಂಡವಾಳ' ಈ ಪದವನ್ನು ನಿಮ್ಮ ವಾಕ್ಯದಲ್ಲಿ ಬಳಸಿರಿ. 1

13. ಕೊಟ್ಟಿರುವ ಪದ್ಯವನ್ನು ಓದಿರಿ, ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.

ನಿನಗೆ ನಾನು, ನನಗೆ ನೀನು
ಸಣ್ಣ ಹಕ್ಕಿಯೆ;
ಹಾಡು ಕೇಳಿ ನಲಿವೆ ನಾನು,
ಬಣ್ಣ ಚುಕ್ಕಿಯೆ.
ಕೇಳ್ದರೇನು ಬಿಟ್ಟರೇನು
ಉಳಿದ ಲೋಕವು ?
ಉಲಿಯೆ ನೀನು, ನಲಿಯೆ ನಾನು,
ನಮಗೆ ನಾಕವು !

– ಕುವೆಂಪು

(1) ಬಣ್ಣ ಚುಕ್ಕಿ ಯಾವುದು ? 1

(A) ಹಾಡು (B) ನಕ್ಷತ್ರ (C) ತಾರೆ (D) ಹಕ್ಕಿ

(2) ನಿನಗೆ ನಾನು, ನನಗೆ ನೀನು 1
ನನಗೆ ನೀನು – ಇವುಗಳ ಬಹುವಚನ ರೂಪ.

(3) ಹಾಡು ಕೇಳಿ ನಲಿವೆ ನಾನು, 2
ಸಂಗೀತದ ಮಹತ್ವವನ್ನು ಕುರಿತು
ಒಂದೆರಡು ವಾಕ್ಯಗಳಲ್ಲಿ ಬರೆಯಿರಿ.

(4) ಉಲಿಯೆ ನೀನು, ನಲಿಯೆ ನಾನು, 2
ನೀನು, ನಾನು
ಈ ಮೇಲಿನ ಸರ್ವನಾಮಗಳಂತೆ ಇನ್ನೆರಡು ಸರ್ವನಾಮಗಳನ್ನು ಬರೆಯಿರಿ.

14. ಗಂಡನನ್ನು ಹೆಂಡತಿ ಯಾವಾಗ ವಿರೋಧಿಸಬೇಕು ? 1

15. ಅ.ರಾ. ಮಿತ್ರ ಅವರ ಪೂರ್ಣ ಹೆಸರೇನು ? 1

16. ಲೇಖಕರಿಗೆ ಪರಮ ಶತ್ರು ಯಾವುದು ? 1

17. ಆನೆ ಬೀದಿಯಲ್ಲಿ ಬರುವಾಗ ಏನು ಬೊಗಳುವುದು ? 1

18. (a) ಕಥಾನಾಯಕನ ತಂಗಿಯ ಹೆಸರೇನು ? 1
(b) ಇಂಗ್ಲೆಂಡ್, ಕಥಾನಾಯಕ, ಬ್ಯಾರಿಸ್ಟರ್, ಅರಣ್ಯ–ಇಲ್ಲಿ ಗುಂಪಿಗೆ ಸೇರದ ಪದ. 1

19. ಕೆಳಗಿನವುಗಳಿಗೆ ಉತ್ತರಿಸಿರಿ :
(a) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಬಿಡಿಸಿ ಬರೆಯಿರಿ. 2
(1) ಉದ್ದಗಲ
(2) ಏಕೈಕ
(3) ಕತ್ತೆತ್ತಿ

ಅಥವಾ

'ಇಕೆ' ಪ್ರತ್ಯಯ ಸೇರಿಸಿ 2 ಶಬ್ದ ಮಾಡಿರಿ.

(b) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಕೂಡಿಸಿ ಬರೆಯಿರಿ. 2
(1) ಕೆಂಪಾದ + ಬಣ್ಣ
(2) ಮೂರು + ಮಡಿ
(3) ಹಿರಿದು + ದಾರಿ

ಅಥವಾ

ಆಡುವುದರ ಭಾವ 'ಆಟ' ಹೀಗೆ 'ಟ' ಪ್ರತ್ಯಯ ಸೇರುವಂತೆ ಎರಡು ಶಬ್ದ ಬರೆಯಿರಿ.

(c) ಕೆಳಗೆ ಕೊಟ್ಟಿರುವ ಶಬ್ದಗಳಲ್ಲಿ ಯಾವುದಾದರೂ ಎರಡಕ್ಕೆ ವಿರುದ್ಧ ಪದ ಬರೆಯಿರಿ. 2
(1) ಸ್ತುತಿ
(2) ಸಮಾಧಾನ
(3) ಹೊಗಳು

ಅಥವಾ

ಕೊಟ್ಟಿರುವ ವಾಕ್ಯಗಳಲ್ಲಿ ಗೆರೆ ಎಳೆದಿರುವ ಶಬ್ದಕ್ಕೆ ಸಮಾನಾರ್ಥಕ ಪದ ಬರೆಯಿರಿ.
(1) ನಿಮ್ಮ ಆದಾಯ <u>ತೆರಿಗೆ</u>ಯನ್ನು ಕ್ಷಣದಲ್ಲಿ ಗುಣಿಸಿ ಮುಗಿಸಬಲ್ಲಿರಿ.
(2) ಆ <u>ಗೆಳೆಯ</u>ನನ್ನು ಚಿತ್ರದಿಂದ ತೆಗೆದುಹಾಕಬಲ್ಲಿರಿ.

20. ಕೆಳಗೆ ಕೊಟ್ಟಿರುವ ನುಡಿಗಟ್ಟುಗಳಲ್ಲಿ **ಯಾವುದಾದರೂ ಎರಡನ್ನು** ನಿಮ್ಮ ವಾಕ್ಯಗಳಲ್ಲಿ ಪ್ರಯೋಗಿಸಿರಿ. 2

(1) ಮೊರೆಯಿಡು

(2) ಅಡಿಪಾಯ

(3) ಕರುಳಕುಡಿ

21. "ಅರ್ಥವಿಲ್ಲದ" ಈ ಪದವು ಯಾವ ಸಂಧಿಯ ನಿಯಮದಲ್ಲಿ ಬರುತ್ತದೆ ? 1

22. ಗೃಹ ಜೀವನಕ್ಕಾಗಿ ಭವಿಷ್ಯದಲ್ಲಿ ಕಂಪ್ಯೂಟರ್‌ನ ಕೊಡುಗೆಗಳೇನು ? 4

23. ಶ್ರಮಿಕ ವರ್ಗದವರ ಕುಲಕಸುಬು ಹಾಗೂ ಹಣಕಾಸಿನ ಸ್ಥಿತಿಗತಿಗಳನ್ನು ಕವಿ ಸಿದ್ದಲಿಂಗಯ್ಯ ಹೇಗೆ ಚಿತ್ರಿಸಿದ್ದಾರೆ ? 5

24. ಹುಯೆನ್–ತ್ಸಾಂಗ್ ಇಂಡಿಯಾ ದೇಶಕ್ಕೆ ಬಂದ ಮಾರ್ಗ ಯಾವುದು ? ತಿಳಿಸಿರಿ. 5

ಅಥವಾ

ಪ್ರೀತಿಯು ವಿಸ್ಮಯವಾದುದು ಎಂದು ಪದ್ಯ ಹೇಗೆ ಧ್ವನಿಸುತ್ತದೆ ?

25. ಕೊಟ್ಟಿರುವ ಪದಗಳಲ್ಲಿ **ಯಾವುದಾದರೂ ಎರಡಕ್ಕೆ** ಎರಡು ಶಬ್ದಗಳನ್ನು ಬಳಸಿಕೊಂಡು ಅರ್ಥಪೂರ್ಣವಾಗಿ ನಿಮ್ಮ ವಾಕ್ಯಗಳಲ್ಲಿ ಬರೆಯಿರಿ. **2+2=4**

(a) ಹೊಟ್ಟೆ – ಬಟ್ಟೆ

(b) ಹಳ್ಳ – ಕೊಳ್ಳ

(c) ಪ್ರದಾನ – ಪ್ರಧಾನ

26. ಕುವೆಂಪು ವಿಶ್ವವಿದ್ಯಾಲಯ ಶಿವಮೊಗ್ಗ, ಇಲ್ಲಿ ದಾಖಲಾದ ಸಂಶೋಧನಾ ಕೇಂದ್ರಗಳ ಸಂಖ್ಯೆಗಳನ್ನು ಕೊಡಲಾಗಿದೆ. ಅವುಗಳ ಸಹಾಯದಿಂದ ರೇಖಾ ಚಿತ್ರವನ್ನು ರಚಿಸಿರಿ. 5

ವರ್ಷ	1985	1986	1987	1988	1989	1990	1991	1992	1993	1994
ಸಂಶೋಧನಾ ಕೇಂದ್ರಗಳು	7	9	13	15	16	19	20	27	31	35

ಅಥವಾ

ನೀವು ಆನಂದ ತಂದೆ ನಂದೀಶ, ಊರು ಹುಬ್ಬಳ್ಳಿ, ಬಿ.ಕಾಮ್. ಪದವೀಧರರು ಎಂದು ಭಾವಿಸಿ ಕೆಳಗಿನ ಅರ್ಜಿಯನ್ನು ಭರ್ತಿ ಮಾಡಿರಿ.

ಗೆ,

ಶಾಖಾಧಿಕಾರಿಗಳು

ಭಾರತೀಯ ಜೀವ ವಿಮಾ

ಮೈಸೂರು ಶಾಖೆ

ಉದ್ಯೋಗದ ಹೆಸರು – ಹೆಚ್.ಜಿ.ಎ. (ತಾತ್ಕಾಲಿಕ)

ಪ್ರ.ನಂ.ದಿ. – ಆರ್.ಪಿ. 6/14 - 15, ದಿನಾಂಕ – 7.8.2015

ಹೆಸರು : .....

ತಂದೆ : .....

ಜನ್ಮಸ್ಥಳ : .....

ಹುಟ್ಟಿದ ದಿನಾಂಕ : .....

ಪೂರ್ಣವಿಳಾಸ : .....

ರಾಷ್ಟ್ರೀಯತೆ : .....

ಮತ/ಜಾತಿ : .....

ವಿದ್ಯಾರ್ಹತೆ : .....

ಅನುಭವ : .....

ಓದಿದ ಶಾಲೆಯಿಂದ ದೃಢೀಕರಣ ಪತ್ರ : .....

ಬ್ಯಾಂಕ್/ಅಂಚೆ ಕಛೇರಿ ಹೆಸರು : .....

ಖರೀದಿಸಿದ : ಡಿ.ಡಿ./ಪಿ.ಓ.ನಂ : .....

ಮೇಲ್ಕಂಡ ವಿಷಯಗಳಿಗೆ ಸಂಬಂಧಿಸಿದ ಸರ್ಟಿಫಿಕೇಟುಗಳನ್ನು ಲಗತ್ತಿಸಿದ್ದೇನೆ. ನಾನು ಸಲ್ಲಿಸುತ್ತಿರುವ ಅರ್ಜಿಯಲ್ಲಿನ ಎಲ್ಲಾ ವಿಚಾರಗಳು ನಿಜ ಎಂದು ಪ್ರಮಾಣೀಕರಿಸುತ್ತೇನೆ.

ಧನ್ಯವಾದಗಳು

ತಮ್ಮ ನಂಬುಗೆಯ

ಹಸ್ತಾಕ್ಷರ

(ಹೆಸರು)

27. ರಾಮಾಯಣದಲ್ಲಿ ಸೀತೆಯ ಪಾತ್ರ ಆದರ್ಶ ಪಾತ್ರ, ವಿವರಿಸಿರಿ. 5

28. ಕೆಳಗಿನ ವಾಕ್ಯಗಳನ್ನು ಓದಿ, ಸೂಚಿಸಿರುವಂತೆ ಬರೆಯಿರಿ. 1x5=5

(1) ವಿವೆಕಾನೆಂದರು ಒಬ ಯುವಾ ಶಕಿ.
(ಶುದ್ಧರೂಪದಲ್ಲಿ ಬರೆಯಿರಿ)

(2) ಪಾಂಡವರು – ಕೌರವರು ಸಾಮ್ರಾಜ್ಯಕ್ಕಾಗಿ ಹೊಡೆದಾಡಿದರು: ಕೌರವರು ಇದರ ಏಕವಚನ ರೂಪ _____.

(3) ಕಷ್ಟ–ಕಾರ್ಪಣ್ಯ : ಜೋಡಿಪದ : : ಜುಳುಜುಳು _____.

(4) ರಾಮನು ಶಾಲೆಯಿಂದ ಬಂದು ಊಟ ಮಾಡಿದನು .....
(ಭವಿಷತ್ ಕಾಲಕ್ಕೆ ಪರಿವರ್ತಿಸಿರಿ)

(5) ಓಹೋ ಅವನು ಗೆದ್ದನೇ .....
(ಇಲ್ಲಿ ಇರಬೇಕಾದ ಲೇಖ ಚಿಹ್ನೆ)

29. ನೀವು ಸುದೀಪ/ಸುಧಾ ಊರು ಯತ್ನಳ್ಳಿ, ಎಂದು ಭಾವಿಸಿ ನಿಮ್ಮ ಊರ ರಸ್ತೆ ದುರಸ್ತಿಗಾಗಿ ವಿನಂತಿಸಿ, ಪೌರಾಯುಕ್ತರು ಮಹಾನಗರ ಪಾಲಿಕೆ ವಿಜಯಪುರ ಇವರಿಗೆ ಪತ್ರ ಬರೆಯಿರಿ. 7

ಅಥವಾ

ಧಾರವಾಡದಲ್ಲಿರುವ ವಸತಿ ಶಾಲೆಯೊಂದರಲ್ಲಿ 11 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ರಾಜು/ಗೀತಾ ಎಂದು ಭಾವಿಸಿ, ವಿಜಯನಗರ ಮೈಸೂರಿನಲ್ಲಿರುವ ನಿಮ್ಮ ತಂದೆಯವರಿಗೆ ನಿಮ್ಮ ದಿನಚರಿ ಕುರಿತು ಒಂದು ಪತ್ರ ಬರೆಯಿರಿ.

30. ಈ ಕೆಳಗಿನ ಗಾದೆಗಳಲ್ಲಿ **ಯಾವುದಾದರೂ ಒಂದನ್ನು** ಕುರಿತು **50** ಶಬ್ದಗಳಿಗೆ ಮೀರದಂತೆ ಬರೆಯಿರಿ. 5

(1) ದುಡಿಮೆಯೇ ದೇವರು
(2) ತುಂಬಿದ ಕೊಡ ತುಳುಕುವದಿಲ್ಲ
(3) ಶಕ್ತಿಗಿಂತ ಯುಕ್ತಿಮೇಲು

31. ಕೆಳಗಿನ ವಿಷಯಗಳಲ್ಲಿ **ಯಾವುದಾದರೂ ಒಂದನ್ನು** ಕುರಿತು **200** ಶಬ್ದಗಳಿಗೆ ಮೀರದಂತೆ ಪ್ರಬಂಧವನ್ನು ಬರೆಯಿರಿ. 10

(1) ಪ್ರಕೃತಿಯ ವಿಕೋಪಗಳು
(2) ನಾನು ಪ್ರಧಾನಮಂತ್ರಿಯಾದರೆ .....
(3) ಗ್ರಂಥಾಲಯ

- o O o -